ಸರ್ಕಾರ ಅನರ್ಹರು ಹೊಂದಿರುವ ಹಸಿರು ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ರದ್ದು ಪಡಿಸುವ ಉದ್ದೇಶದಿಂದ ಪಡಿತರ ಚೀಟಿಗಳನ್ನು ಗಣಕೀಕರಣಗೊಳಿಸಲು ಆದೇಶ ಸಂಖ್ಯೆ ಎಫ್‌ಸಿಎಸ್ 275 ಡಿಆರ್‌ಎ 99ರ ದಿನಾಂಕ 10.12.99 ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು ಈ ಯೋಜನೆಯಿಂದ ಅನರ್ಹರು ಹೊಂದಿರುವ ಹಸಿರು ಪಡಿತರ ಚೀಟಿಗಳನ್ನು ತೆಗೆದುಹಾಕಲು ಕ್ರಮ ವಹಿಸಲಾಗುವುದು.

(ಆ) ಹೌದು.

(ಇ) ಬೆಂಗಳೂರಿನ ಅನೌಪಚಾರಿಕ ಪಡಿತರ ಪ್ರದೇಶ ಹಾಗೂ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿ ಕಾರ್ಡುಗಳ ಗಣಕೀಕರಣವನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು ಈ ದಿಶೆಯಲ್ಲಿ ಗಣಕೀಕರಣ ಕಂಪೆನಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ದಿನಾಂಕ 20-4-2000 ರಂದು ಬಹಿರಂಗವಾಗಿ ಟೆಂಡರ್‌ಗಳನ್ನು ತೆರೆಯಲಾಗುವುದು. ಈ ಪ್ರಕ್ರಿಯೆಯನ್ನು ಬೆಂಗಳೂರಿನಲ್ಲಿ 4-5 ತಿಂಗಳುಗಳಲ್ಲಿ ಮುಗಿಸುವ ಅಂದಾಜಿದೆ. ನಂತರ ಬೀದರ್ ಜಿಲ್ಲೆಯು ಸೇರಿದಂತೆ, ರಾಜ್ಯದ ಇತರ ಪ್ರದೇಶಗಳಲ್ಲಿ ಕಾರ್ಡುಗಳ ಗಣಕೀಕರಣವನ್ನು ಹಂತ ಹಂತವಾಗಿ, ಪ್ರಾರಂಭಿಸುವುದನ್ನು ಪರಿಶೀಲಿಸಲಾಗುವುದು.

(ಈ) ಟೆಂಡರ ಇತ್ಯರ್ಥಗೊಳಿಸಿದ ನಂತರ ಮಾತ್ರ ಈ ಅಂದಾಜು ವೆಚ್ಚದ ಬಗ್ಗೆ ಮಾಹಿತಿಗಳು ದೊರೆಯಲಿವೆ.

ಬೀದರ್ ಜಿಲ್ಲೆಯಲ್ಲಿ ಸಣ್ಣ ಕೆರೆಗಳ ಹೂಳೆತ್ತುವ ಬಗ್ಗೆ

1853 (2511) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ):

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ವಿಶ್ವಬ್ಯಾಂಕ್‌ನ ನೆರವಿನಿಂದ ಸಣ್ಣ ಕೆರೆಗಳ ಹೂಳೆತ್ತಲು "ಜಲಸಂವರ್ಧನ" ಎನ್ನುವ ಯೋಜನೆಯನ್ನು ರೂಪಿಸಲಾಗಿರುವುದು ನಿಜವೇ;

(ಆ) ಮುಂದಿನ ವರ್ಷಗಳಲ್ಲಿ 25,000 ಕೆರೆಗಳ ಹೂಳೆತ್ತಿ ಪುನರುಜ್ಜೀವನಗೊಳಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ನಿಜವಲ್ಲವೆ;

(ಇ) ಹಾಗಿದ್ದಲ್ಲಿ, ಇದಕ್ಕಾಗಿ ವಿಶ್ವಬ್ಯಾಂಕ್‌ನಿಂದ ಬಂದಿರುವ ನೆರವಿನ ಮೊತ್ತವೆಷ್ಟು;

(ಈ) ಈ ಯೋಜನೆಯ ಅಂಗವಾಗಿ ಪ್ರಾರಂಭಿಕವಾಗಿ ಈ ವರ್ಷ ರಾಜ್ಯದಲ್ಲಿ ಎಷ್ಟು ಕೆರೆಗಳಲ್ಲಿ ಹೂಳೆತ್ತಿ ಪುನರುಜ್ಜೀವನ ಗೊಳಿಸಲಾಗುವುದು;

(ಉ) ಇದಕ್ಕಾಗಿ ಈ ವರ್ಷ ಖರ್ಚು ಮಾಡಲಾಗುವ ಹಣವೆಷ್ಟು; (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

(ಊ) ಈ ವೈಕಿ ಬೀದರ್ ಜಿಲ್ಲೆಯಲ್ಲಿ ಈ ವರ್ಷ ಎಷ್ಟು ಕೆರೆಗಳಲ್ಲಿ ಹೂಳೆತ್ತಲಾಗುವುದು ಹಾಗೂ ಇದಕ್ಕಾಗಿ ವೆಚ್ಚ ಮಾಡುವ ಹಣವೆಷ್ಟು? (ಪೂರ್ಣ ವಿವರಗಳನ್ನು ತಾಲ್ಲೂಕುವಾರು ಅಂಕಿ ಅಂಶ ಒದಗಿಸುವುದು)

ಶೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

(ಅ) ವಿಶ್ವಬ್ಯಾಂಕ್ ನೆರವಿನಿಂದ ಸಣ್ಣ ನೀರಾವರಿ ಕೆರೆಗಳಲ್ಲಿ ತುಂಬಿರುವ ಹೂಳೆತ್ತುವ ಕಾಮಗಾರಿ ಸೇರಿದಂತೆ ಸಮಗ್ರ ಅಭಿವೃದ್ಧಿಗಾಗಿ ಯೋಜನೆಯು ತಯಾರಿಕೆ ಹಂತದಲ್ಲಿದೆ.

(ಆ) ಕೆರೆಗಳ ಹೂಳೆತ್ತಿ ಪುನರುಜ್ಜೀವನಗೊಳಿಸುವ ಯೋಜನೆಗೆ ವಿಶ್ವಬ್ಯಾಂಕ್‌ನಿಂದ ನೆರವು ದೊರೆತಲ್ಲಿ ಮುಂಬರುವ ಸುಮಾರು 25,000 ಕೆರೆಗಳಲ್ಲಿ ಹೂಳೆತ್ತಿ ಪುನರುಜ್ಜೀವನಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ.

(ಇ) ಪ್ರಸ್ತಾಪಿತ ಯೋಜನೆಯು ಇನ್ನು ತಯಾರಿಕೆ ಹಂತದಲ್ಲಿರುವುದರಿಂದ ಇನ್ನೂ ಯಾವುದೇ ನೆರವು ಬಂದಿರುವುದಿಲ್ಲ.

(ಈಉಊ) ಪ್ರಸ್ತಾಪಿತ ಯೋಜನೆಯು ಇನ್ನು ತಯಾರಿಕಾ ಹಂತದಲ್ಲಿರುವುದರಿಂದ ಈ ಮಾಹಿತಿಗಳು ಲಭ್ಯವಿರುವುದಿಲ್ಲ.

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ ಬಡ್ತಿಯಲ್ಲಿ

ಮೀಸಲಾತಿ ಉಲ್ಲಂಘನೆ.

1855 (2278) ಶ್ರೀ ಡಿ.ಆರ್. ಪಾಟೀಲ್ (ಗದಗ್):

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ ಸೇವೆಯಲ್ಲಿ ಪರಿಶಿಷ್ಟರಿಗೆ ಬಡ್ತಿ ನೇಮಕಾತಿಯಲ್ಲಿ ಮಿಾಸಲಾತಿ ಉಲ್ಲಂಘನೆ ಕುರಿತು ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಇವರು ಸಲ್ಲಿಸಿದ ವರದಿ ಸರ್ಕಾರದ ಗಮನಕ್ಕೆ ಬಂದಿದೆಯೆ;

(ಆ) ಈ ಮಿಾಸಲಾತಿ ಉಲ್ಲಂಘನೆಗಾಗಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಾಸನ ಬದ್ಧ ಶಿಸ್ತು ಕ್ರಮ ಜರುಗಿಸಲು ಸರ್ಕಾರ ಕ್ರಮ ಕೈಗೊಂಡಿದೆಯೆ;

(ಇ) ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ ಅವರ ಮುಖ್ಯ ಅಭಿವೃದ್ಧಿ ಅಧಿಕಾರಿ, ಧಾರವಾಡ, ಖಾಲಿ ಇದೆಯೆ? ಹಾಗಾದರೆ ಈ ಹುದ್ದೆ ತುಂಬಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು)

(ಅ) ಹೌದು.